

# ಕೆ.ಎಲ್.ಇ. ಸಂಸ್ಥೆಯ

# ಶ್ರೀ ಮೃತ್ಯುಂಜಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಧಾರವಾಡ

### ನ್ಯಾಕ್‌ನಿಂದ ಎ+ ಗ್ರೇಡ್ ಮಾನ್ಯತೆ ಪಡೆದಿದೆ

## ವ್ಯಸನಮುಕ್ತ ದಿನಾಚರಣೆ

## ವರದಿ

ಧಾರವಾಡದ ಕೆ.ಎಲ್.ಇ ಸಂಸ್ಥೆಯ ಶ್ರೀ ಮೃತ್ಯುಂಜಯ ಮಹಾವಿದ್ಯಾಲಯದಲ್ಲಿ 01/08/2025ರಂದು ಶ್ರೀ ಮ. ನಿ. ಪ್ರ. ಡಾ. ಮಹಾಂತ ಶಿವಯೋಗಿಗಳು, ಶ್ರೀ ವಿಜಯ ಮಹಾಂತೇಶ್ವರ ಸಂಸ್ಥಾನಮಠ, ಚಿತ್ತರಗಿ, ಇಳಕಲ್ಲ ಪೂಜ್ಯರ ಜನ್ಮದಿನದ ನಿಮಿತ್ಯ **"ವ್ಯಸನಮುಕ್ತ ದಿನಾಚರಣೆ"ಯನ್ನು** ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪ್ರೊ. ಮಲ್ಲಪ್ಪ ಗಾಣಿಗೇರ, ಪ್ರಾಚಾರ್ಯರು, ಶಿವಾಜಿ ಕಾಲೇಜು, ಧಾರವಾಡ ಇವರು ಮಾತನಾಡುತ್ತಾ ಪೂಜ್ಯರಾದ ಇಳಕಲ್ಲ ಮಹಾಂತ ಶಿವಯೋಗಿಗಳು ಇಡೀ ತಮ್ಮ ಜೀವಮಾನದ ತುಂಬಾ ಜನರಲ್ಲಿರುವ ದುಶ್ಚಟಗಳನ್ನು ಬಿಡಿಸಲು ಶ್ರಮಿಸಿದರು. ಹತ್ತಾರು ಹಳ್ಳಿಗಳನ್ನು, ದೇಶ, ವಿದೇಶಗಳನ್ನು ಸಂಚರಿಸಿ ಲಕ್ಷಾಂತರ ದುಶ್ಚಟಗಳನ್ನು ಬಿಡಿಸಿ ಅವರ ಬದುಕನ್ನು ಹಸನಾಗಿಸಿದ್ದಾರೆ. ಇಂದು ದುಶ್ಚಟಗಳು ಅಧಿಕವಾಗಿ ಯುವಕರಿಂದ ಮುದುಕರವರೆಗೂ ಮತ್ತು ಕೆಲವು ಯುವತಿಯರು ಕೂಡ ದುಶ್ಚಟಕ್ಕೆ ದಾಸರಾಗಿ ತಮ್ಮ ಜೀವನ ಹಾಳುಮಾಡಿಕೊಂಡು ಸಮಾಜಕ್ಕೆ ಹೊರೆಯಾಗುತ್ತಿದ್ದಾರೆ. ಕುಟುಂಬದ ಸಂಸ್ಕಾರದಿಂದ, ಸತ್ಸಂಗದ ಸಂಪರ್ಕದಿಂದ ಇವುಗಳಿಂದ ಮುಕ್ತರಾಗಬಹುದು. ಆದ್ದರಿಂದ ವಿದ್ಯಾರ್ಥಿಗಳು ಇಂತಹವುಗಳಿಂದ ದೂರವಿದ್ದು ದುಶ್ಚಟಗಳಿಂದ ಹೇಗೆ ಮುಕ್ತರಾಗಬಹುದೆಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ.ನೀಲಕ್ಕ ಸಿ. ಪಾಟೀಲ, ವಿದ್ಯಾರ್ಥಿಗಳು ಪೂಜ್ಯರ ಆದರ್ಶಗಳನ್ನು ಅಳವಡಿಸಿಕೊಂಡರೆ, ಆಧ್ಯಾತ್ಮಿಕ ಚಿಂತನೆಯಲ್ಲಿ ಕ್ರೀಡಾ ಚಟುವಟಿಕೆಗಳಲ್ಲಿ, ಯೋಗ ಅಧ್ಯಯನದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರೆ ಯಾವುದೇ ದುಶ್ಚಟಗಳು ಅಂಟಿಕೊಳ್ಳುವುದಿಲ್ಲ ಎಂದು ಮಾತನಾಡಿದರು. ಕಾರ್ಯಕ್ರಮದಲ್ಲಿ ಯುತ್ ರೆಡ್ ಕ್ರಾಸ್ ಘಟಕದ ಅಧಿಕಾರಿ ಡಾ.ಬಾಬು ಬೆಣ್ಣಿ, ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.




ಧಾರವಾಡದ ಕೆ.ಎಲ್.ಇ ಸಂಸ್ಥೆಯ ಶ್ರೀ ಮೃತ್ಯುಂಜಯ ಮಹಾವಿದ್ಯಾಲಯದಲ್ಲಿ 01/08/2025ರಂದು ಶ್ರೀ ಮ. ನಿ. ಪ್ರ. ಡಾ. ಮಹಾಂತ ಶಿವಯೋಗಿಗಳು, ಚಿತ್ತರಗಿ ಶ್ರೀ ವಿಜಯ ಮಹಾಂತೇಶ್ವರ ಸಂಸ್ಥಾನಮಠ, ಚಿತ್ತರಗಿ ಇಳಕಲ್ಲ ಪೂಜ್ಯರ ಜನ್ಮದಿನದ ನಿಮಿತ್ಯ **ವ್ಯಸನಮುಕ್ತ ದಿನಾಚರಣೆಯನ್ನು** ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಪ್ರೊ. ಮಲ್ಲಪ್ಪ ಗಾಣಿಗೇರ, ಪ್ರಾಚಾರ್ಯರು, ಶಿವಾಜಿ ಕಾಲೇಜು, ಧಾರವಾಡ ಇವರು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಿರುವುದು.




ಕಾರ್ಯಕ್ರಮದಲ್ಲಿ ವೈ.ಆರ್.ಸಿ. ಘಟಕದ ಅಧಿಕಾರಿ ಡಾ.ಬಾಬು ಬೆಣ್ಣಿಯವರು ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡುತ್ತಿರುವುದು.